# ಪ್ರೊ. ಕೆ.ಎಸ್. ನಿಸಾರ್ ಅಹಮದ್

ಹಾ.ಮಾ.ನಾಯಕರ ನಂತರ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಬಂದವರು ಪ್ರೊ.ಕೆ.ಎಸ್.ನಿಸಾರ್ ಅಹಮದ್, ೧೯೭೮ರಲ್ಲಿ ಪ್ರಕಟಗೊಂಡ ನಿಸಾರ್ ಅಹಮದ್ ಅವರ ಪ್ರಥಮ ಭಾವಗೀತೆಗಳ ಸಂಗ್ರಹ 'ನಿತ್ಯೋತ್ಸವ' ಜನಪ್ರಿಯವಾಗಿ ಇದುವರೆಗೂ ಹತ್ತಾರು ಆವೃತ್ತಿಗಳನ್ನು ಕಂಡಿವೆ. ಅಲ್ಲದೆ ೧೯೭೮ರಲ್ಲಿ ಹೊರಬಂದ ಕನ್ನಡದ ಮೊತ್ತಮೊದಲ ಸುಗಮ ಸಂಗೀತ ಧ್ವನಿಸುರುಳಿ ಎಂಬ ಹೆಗ್ಗಳಿಕೆಗೂ 'ನಿತ್ಯೋತ್ಸವ' ಪಾತ್ರವಾಯಿತು. 'ಜೋಗದ ಸಿರಿ ಬೆಳಕಿನಲ್ಲಿ' ಗೀತೆ ಅತ್ಯಂತ ಜನಪ್ರಿಯ ಹಾಡು. ಅದನ್ನು ಬರೆದ ನಿಸಾರ್ ಅಹಮದ್ ಅವರೂ ಜನಪ್ರಿಯ ಕರಿ.
೧೨ ಕವನ ಸಂಗ್ರಹಗಳು, ೫ ವೈಚಾರಿಕ ಹಾಗೂ ವಿಮರ್ಶಾತ್ಮಕ ಕೃತಿಗಳು, ೪ ಅನುವಾದ ಕೃತಿಗಳು, ೫ ಮಕ್ಕಳ ಸಾಹಿತ್ಯ ಕೃತಿಗಳು, ೧೨ ಸಂಪಾದಿತ ಕೃತಿಗಳು, ೮ ಧ್ವನಿಸುರುಳಿಗಳು – ಹೀಗೆ ನಿಸಾರ್ ಅಹಮದ್ ಅವರದ್ದು ಬಹು ವಿಸ್ತೃತ ಸಾಹಿತ್ಯ ಕೃಷಿ. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರ ಶ್ರೀಮಂತಗೊಳ್ಳಲು ಇವರು ನೀಡಿರುವ ಕೊಡುಗೆ ಅತ್ಯಮೂಲ್ಯವಾದುದು.
ನಿಸಾರರು ಅಕಾಡೆಮಿಯ ಚಟುವಟಿಕೆಗಳನ್ನು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಿದ್ದು ಗಮನಾರ್ಹ. ಅಕಾಡೆಮಿಯ ಅಧ್ಯಕ್ಷತೆ ವಹಿಸಿಕೊಂಡ ನಿಸಾರರು ಮೊದಲಿಗೆ ಅಕಾಡೆಮಿಯ ಸದಸ್ಯರಲ್ಲಿ ಅನೇಕ ಹಿರಿಯ ಸಾಹಿತಿಗಳನ್ನು, ಸಾಹಿತ್ಯಾಸಕ್ತರನ್ನು, ಕಲಾವಿದರನ್ನು, ಪತ್ರಕರ್ತರನ್ನು ಅನೌಪಚಾರಿಕ ಸಭೆಗೆ ಆಹ್ವಾನಿಸಿ ಅಕಾಡೆಮಿ ಕೈಗೊಳ್ಳಬೇಕಾದ ಯೋಜನೆಗಳ ಬಗ್ಗೆ ಅಭಿಪ್ರಾಯಗಳನ್ನು ಸಂಗ್ರಹಿಸಿದರು. ಮಾಸ್ತಿ, ಶ್ರೀರಂಗ, ಗೊರೂರು, ಗೋಪಾಲಕೃಷ್ಣ ಅಡಿಗ, ಕೆ.ಎಸ್.ನರಸಿಂಹಸ್ವಾಮಿ, ಜಿ.ವೆಂಕಟಸುಬ್ಬಯ್ಯ, ಜಿ. ನಾರಾಯಣ, ಸಿದ್ದಯ್ಯ ಪುರಾಣಿಕ, ಪರ್ವತವಾಣಿ – ಮೊದಲಾದ ಅನೇಕ ಹಿರಿಯರ ಸಲಹೆ ಹಾಗೂ ಮಾರ್ಗದರ್ಶನಗಳು ಅಕಾಡೆಮಿಯ ಈ ಅವಧಿಯ ಬೆಳವಣಿಗೆಗೆ ಪೂರಕವಾದವು. ಇಂತಹ ಪ್ರಯತ್ನ ಈ ಹಿಂದೆ ನಡೆದಿರಲಿಲ್ಲ ಎಂಬ ಕಾರಣಕ್ಕಾಗಿ ಇದು ಹೆಚ್ಚು ಮಹತ್ವಪೂರ್ಣವಾಯಿತು. ಸಾಹಿತ್ಯ ಸಮಾವೇಶಗಳು, ವಿಚಾರಗೋಷ್ಠಿಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ, ಕೋಲ್ಕತ್ತಾ, ಮುಂಬೈಗಳಂತಹ ಮಹಾನಗರಗಳಿಗೂ ವಿಸ್ತರಿಸಿದವಲ್ಲದೆ ಗಡಿಭಾಗಗಳಿಗೆ, ಗ್ರಾಮೀಣ ಪ್ರದೇಶಗಳಿಗೆ ವಿಕೇಂದ್ರೀಕರಣಗೊಂಡು ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೩೦೦ ಕಾರ್ಯಕ್ರಮಗಳು ಜರುಗಿದ್ದು ದಾಖಲೆಯ ಸ್ವರೂಪವನ್ನು ಪಡೆಯಿತು. ಅಕಾಡೆಮಿಯ ಎಲ್ಲ ಸದಸ್ಯರಿಗೂ ತಮ್ಮ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ಕಾರ್ಯಗತಗೊಳಿಸುವ ಮುಕ್ತ ಅವಕಾಶವನ್ನು ನೀಡಲಾಗಿತ್ತು. ಬಿ.ಟಿ.ಲಲಿತಾ ನಾಯಕರೂ ತಮ್ಮ ಕ್ಷೇತ್ರದಲ್ಲಿ ಸ್ಥಳೀಯರ ಪ್ರತಿಭೆಗಳನ್ನು ಬೆಳಕಿಗೆ ತರುತ್ತಾ ನಾಡಿನ ಅನೇಕ ಹಿರಿಯ ಸಾಹಿತಿಗಳನ್ನು ಅಲ್ಲಿನ ಜನತೆಗೆ ಪರಿಚಯಿಸುತ್ತಾ ನಡೆಸಿದ ಹಲವಾರು ಕಾರ್ಯಕ್ರಮಗಳನ್ನು ನೆನೆಸಿಕೊಳ್ಳುತ್ತಾರೆ. ಕಾವ್ಯ, ವಿಮರ್ಶೆಗಳಿಗೆ ಸೀಮಿತವಾಗಿದ್ದ ವಾರ್ಷಿಕ ಪ್ರಕಟಣೆಗಳನ್ನು ಪ್ರಬಂಧ, ಮಕ್ಕಳ ಸಾಹಿತ್ಯಗಳಿಗೂ ವಿಸ್ತರಿಸಿದ್ದಲ್ಲದೆ ಕಾವ್ಯ ವಿಮರ್ಶೆ, ಸಣ್ಣಕಥೆ, ಪ್ರಬಂಧಗಳ ಪುಸ್ತಕಗಳನ್ನು ಈ ಅವಧಿಯಲ್ಲಿ ಪ್ರಥಮ ಬಾರಿಗೆ ಹೊರತರಲಾಯಿತು.

ಪ್ರೊ. ನಿಸಾರ್ ಅಹಮದ್ ಅವರ ಅಧ್ಯಕ್ಷತೆಯ ಅವಧಿಯಲ್ಲಿ ಸಾಹಿತ್ಯ ಅಕಾಡೆಮಿ ಕೈಗೊಂಡ ಜನಪರ ಹಾಗೂ ಸಮಾಜಮುಖಿ ಹಾಗೂ ಮಹತ್ತರ ಯೋಜನೆಗಳಲ್ಲಿ 'ದ್ರಾವಿಡ ಭಾಷಾ ಸಾಹಿತ್ಯ ವಿಚಾರ ಸಂಕಿರಣವು ಒಂದು. ಕೆ.ಶಿವರಾಮ ಕಾರಂತರು ಉದ್ಘಾಟಿಸಿದ ಈ ಇಡೀ ದಿವಸದ ಕಾರ್ಯಕ್ರಮದಲ್ಲಿ ನೆರೆಯ ರಾಜ್ಯಗಳ ಸಾಹಿತ್ಯಾವಲೋಕನ, ಅದನ್ನಾಧರಿಸಿದ ಚರ್ಚೆಗಳು ನಡೆದವಲ್ಲದೆ ಒಂದು ರಾಜ್ಯಮಟ್ಟದ ಕವಿಗೋಷ್ಠಿಯೂ ನಡೆದು ಅನ್ಯಭಾಷೆಯ ಕವಿಗಳು ಅದರಲ್ಲಿ ಪಾಲ್ಗೊಂಡಿದ್ದರು.

೧೯೮೫ರಲ್ಲಿ ಮೈಸೂರಿನಲ್ಲಿ ಪ್ರಪ್ರಥಮವಾಗಿ ವಿಶ್ವ ಕನ್ನಡ ಸಮ್ಮೇಳನ ನಡೆದಾಗ ಕಲಾಮಂದಿರದ ಉದ್ಘಾಟನೆ ಸಹ ಕರ್ನಾಟಕ ಸಾಹಿತ್ಯ ಅಕಾಡೆಮಿಯ ನೇತೃತ್ವದಲ್ಲಿ ಮೂರು ದಿನಗಳ ಕಾಲ ನಡೆದದ್ದು ಗಮನಾರ್ಹ ಸಂಗತಿ. ಆಗ ರಾಷ್ಟ್ರಕವಿ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಕವಿಗೋಷ್ಠಿ ನಡೆಯಿತು. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಬಿ.ರಾಚಯ್ಯ, ಜೀವರಾಜ ಆಳ್ವ, ಖ್ಯಾತ ಫ್ರೆಂಚ್ ಹಾಗೂ ಆಂಗ್ಲ ಸಾಹಿತಿ ಹಾಸನದ ರಾಜಾರಾವ್ ಮುಂತಾದ ಗಣ್ಯರು ಈ ಗೋಷ್ಠಿಯನ್ನು ವೀಕ್ಷಿಸಿದರು.

ವಿಶ್ವ ಕನ್ನಡ ಸಮ್ಮೇಳನ ಅಂಗವಾಗಿ ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿ ನಡೆದ ವಸ್ತು ಪ್ರದರ್ಶನದಲ್ಲಿ ಪ್ರಥಮ ಬಾರಿಗೆ ಅಕಾಡೆಮಿ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಿದಾಗ, ಅಲ್ಲಿಯೂ ಹೆಚ್ಚಿನ ಸಂಖ್ಯೆಯ ಸಾಹಿತ್ಯಾಸಕ್ತರು ಬಂದು ಪುಸ್ತಕಗಳನ್ನು ಕೊಂಡರು. ನಿಸಾರ್ ಅವರ ಕಾಲದಲ್ಲೇ ಪ್ರಾರಂಭವಾದ 'ಚಂದನ' ಕನ್ನಡ – ಇಂಗ್ಲೀಷ್ ತ್ರೈಮಾಸಿಕವು ಅಕಾಡೆಮಿಯ ಮುಖವಾಣಿಯಾಗಿತ್ತು. ಹಾಗೆಯೇ ದೂರದರ್ಶನದ ವಾಹಿನಿ ಮೂಲಕ ಅಕಾಡೆಮಿಯ ಕಾರ್ಯಕ್ರಮಗಳನ್ನು ನಾಡಿನ ಮೂಲೆ ಮೂಲೆಗೂ ಪ್ರಚಾರ ಮಾಡಲಾಯಿತು. 'ಸಾಲು ದೀಪಗಳು' (ಕನ್ನಡ ಸಾಹಿತ್ಯ ಪರಂಪರೆಯ ನಿರ್ಮಾಪಕರು' ಈಗ 'ಸಾಲು ದೀಪಗಳು' ಹೆಸರಿನಲ್ಲಿ ಪ್ರಕಟ) ಎಂಬ ಪ್ರತಿಷ್ಠಿತ ಪ್ರಕಟಣೆಯನ್ನು ಹಮ್ಮಿಕೊಂಡು ಅದರ ರೂಪುರೇಷೆಗಳು ನಿರ್ಧರಿತವಾಗಿ ಸಂಬಂಧಪಟ್ಟ ಲೇಖಕರನ್ನು ಬರಹಗಳಿಗಾಗಿ ಒಪ್ಪಿಸಿದ್ದೂ ಇವರ ಕಾಲದಲ್ಲೇ.

ರಾಜ್ಯದ ಲೇಖಕರನ್ನು ಪರರಾಜ್ಯಗಳಿಗೆ ಕಳುಹಿಸಿ, ಪರರಾಜ್ಯಗಳ ಲೇಖಕರನ್ನು ಇಲ್ಲಿ ಕರೆಸಿ ಸಾಹಿತ್ಯ–ಸಾಂಸ್ಕೃತಿಕ ಚಟುವಟಿಕೆಗಳ ಸ್ವರೂಪದ ಬಗ್ಗೆ ಬರೆದು ಕೊಡುವುದೂ ಸುವ್ಯವಸ್ಥಿತವಾಗಿ ನಡೆಯಿತು.

ನಿಸಾರರ ಅವಧಿಯ ಮತ್ತೊಂದು ಪ್ರಮುಖ ಕಾರ್ಯಕ್ರಮ ೧೯೮೭ರ ಫೆ. ೧೪ ಮತ್ತು ೧೫ರಂದು ದೆಹಲಿಯಲ್ಲಿ ಹಮ್ಮಿಕೊಂಡ 'ಸಮಕಾಲೀನ ಭಾರತೀಯ ಸಾಹಿತ್ಯ' ಎಂಬ ರಾಷ್ಟ್ರಮಟ್ಟದ ವಿಚಾರ ಸಂಕಿರಣ. ಭಾಗವಹಿಸುವವರ ಅನುಕೂಲಕ್ಕಾಗಿ ಇಂಗ್ಲೀಷ್‌ನಲ್ಲೇ ನಡೆದ ಈ ಸಮ್ಮೇಳನದ ಅಧ್ಯಕ್ಷತೆಯನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ವಿ.ಕೃ.ಗೋಕಾಕ್ ಅವರು ವಹಿಸಿದ್ದರು. ರಾಮಕೃಷ್ಣ ಹೆಗಡೆ ಉದ್ಘಾಟಿಸಿದ್ದರು. ಕರ್ನಾಟಕ ಭವನದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಬೇರೆ ಬೇರೆ ಭಾಷೆಗಳ ಖ್ಯಾತ ಲೇಖಕರು, ಎ.ಎನ್.ಮೂರ್ತಿರಾವ್, ಆರ್.ಸಿ. ಹಿರೇಮಠ, ಡಾ. ಪ್ರಭುಶಂಕರ ಮುಂತಾದ ಪ್ರಸಿದ್ಧ ಸಾಹಿತಿಗಳು ಭಾಗವಹಿಸಿದ್ದರು. ವಿಚಾರಗೋಷ್ಠಿಯಲ್ಲಿ 'ಬಂಡಾಯ ಸಾಹಿತ್ಯ', ದಲಿತ ಸಾಹಿತ್ಯ' ಬಗ್ಗೆ ಪ್ರಬಂಧ ಮಂಡನೆ ಹಾಗೂ ಚರ್ಚೆ ನಡೆದದ್ದೂ ಆ ಕಾಲಕ್ಕೆ ಒಂದು ವಿಶೇಷ ಸಂಗತಿ.